ಪ್ರಸ್ತಾವದ ಅಂಗೀಕಾರ

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

2013 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ನೀಡಲಾಯಿತು)

(ಅನುಬಂಧ– 1)

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು.)

9. ನಿಯಮ 69ರ ಮೇಲಿನ ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಮತ್ತು ಉತ್ತರ

1. ವಿಷಯ :– ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಕುಸಿಯುತ್ತಿರುವ ಅಂತರ್ಜಲ ಹಾಗೂ

ಇದರ ನಿವಾರಣೆಗಾಗಿ ಹಮ್ಮಿಕೊಳ್ಳಬೇಕಾಗದ "ಶಾಶ್ವತ ನೀರಾವರಿ" ಯೋಜನೆ ಬಗ್ಗೆ.

ಶ್ರೀ ಎಂ.ಬಿ ಪಾಟೀಲ್ (ಜಲ ಸಂಪನ್ಮೂಲ ಸಚಿವರು) :– ಸನ್ಮಾನ್ಯ ಸಭಾಧ್ಯಕ್ಷರೆ, ನಿಯಮ 69ರಡಿಯಲ್ಲಿ ನಿನ್ನೆ ದಿವಸ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಹಿರಿಯ ಸದಸ್ಯರಾದಂಥ ಸನ್ಮಾನ್ಯ ರಮೇಶ್ ಕುಮಾರ್‌ರವರು, ಗೌರವಾನ್ವಿತ ಸದಸ್ಯರಾದಂಥ ಮಾನ್ಯ ಶಿವಶಂಕರ ರೆಡ್ಡಿಯವರು, ಮಾನ್ಯ ರಾಜಣ್ಣರವರು, ಮಾನ್ಯ ಕೃಷ್ಣಾರೆಡ್ಡಿಯವರು, ಮಾನ್ಯ ಮಂಜುನಾಥಗೌಡರವರು ಮತ್ತು ಮಾನ್ಯ ಮಂಜುನಾಥ್‌ರವರು ಹಾಗೂ ಇತರರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಕುಸಿಯುತ್ತಿರುವ ಅಂತರ್ಜಲ ಹಾಗೂ ಇದರ ನಿವಾರಣೆಗಾಗಿ ಹಮ್ಮಿಕೊಳ್ಳಬೇಕಾದ "ಶಾಶ್ವತ ನೀರಾವರಿ" ಯೋಜನೆ ವಿಚಾರದಲ್ಲಿ ಈಗಾಗಲೇ ಪ್ರಸ್ತಾಪ ಮಾಡಿ. ಚರ್ಚೆಯಾಗಿದೆ. ಈ ಬಗ್ಗೆ ಸರ್ಕಾರ ಎರಡು ಭಾಗದಲ್ಲಿ ಉತ್ತರ ಸಿದ್ಧಗೊಳಿಸಿದೆ. ಮೊದಲನೆಯ ಭಾಗದ ಉತ್ತರ ಏನೆಂದರೆ, 1. ಎತ್ತಿನಹೊಳೆ ತಿರುವು ಯೋಜನೆ.

1. **ಎತ್ತಿನಹೊಳೆ ತಿರುವು ಯೋಜನೆ**

ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರನ್ನು ಪೂರೈಸಲು ಸರ್ಕಾರವು ಚಿಂತಿಸುತ್ತಿದ್ದು. ಈ ನಿಟ್ಟಿನಲ್ಲಿ ಈಗಾಗಲೇ ಎತ್ತಿನಹೊಳೆ ತಿರುವು ಯೋಜನೆ ಮತ್ತು ಪರಮಶಿವಯ್ಯ ವರದಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಿದೆ.

ಪಶ್ಚಿಮಾಭಿಮುಖವಾಗಿ ಹರಿಯುವ ಎತ್ತಿನಹೊಳೆ ಮತ್ತು ಅದರ ಉಪನದಿಗಳ 24 ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಮತ್ತಿತರ ಅಗತ್ಯತೆ ಇರುವ ಜಿಲ್ಲೆಗಳಿಗೆ ಒದಗಿಸಲು ಯೋಜನೆ ರೂಪಿಸಲಾಗಿದೆ.

ಎತ್ತಿನಹೊಳೆ ತಿರುವು ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ರಾಜ್ಯದ ಪೂರ್ವ ಭಾಗದ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲು ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಜಸಂಇ 203 ವಿಬ್ಯಾಇ 2012, ಬೆಂಗಳೂರು, ದಿನಾಂಕ

13/7/2012 ರಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಪ್ರವಾಹದ 24.01 ಟಿ.ಎಂ.ಸಿ ನೀರನ್ನು ಸಕಲೇಶಪುರದಿಂದ ರಾಜ್ಯದ ಪೂರ್ವಭಾಗಕ್ಕೆ ತಿರುಗಿಸುವ ರೂ. 8323.50 ಕೋಟಿಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಇದಲ್ಲದೆ, ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯಿಂದ ತೀರುವಳಿಯಾಗಿರುವ ರೂ.3269.50 ಕೋಟಿ ಮೊತ್ತದ ಮೊದಲನೇ ಹಂತದಲ್ಲಿ ಹರವನಹಳ್ಳಿ ವಿತರಣಾ ಕೇಂದ್ರದವರೆಗಿನ ಏತ ಕಾಮಗಾರಿಗಳನ್ನು ಇ.ಪಿ.ಸಿ. / ಟರ್ನ್‌ಕೀ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಸಹ ಅನುಮೋದನೆ ನೀಡಿದೆ.

ಹರವನಹಳ್ಳಿ ವಿತಾರಣಾ ತೊಟ್ಟಿಯ ನಂತರದ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಎರಡನೇ ಹಂತದಲ್ಲಿ ವಿಸ್ತೃತ ಯೋಜನಾ ವದರಿಯನ್ನು ತಯಾರಿಸಿ, ಪರಿಷ್ಕೃತ ಮೊತ್ತಕ್ಕೆ ಸರ್ಕಾರದ ಅನುಮೋದನೆ ಪಡೆದು ನಂತರ ಕೈಗೆತ್ತಿಕೊಳ್ಳಲು ಸಹ ಸೂಚಿಸಿದೆ, ಸರ್ಕಾರದ ಆದೇಶದಂತೆ, ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ಟೆಂಡರ್ ಮೂಲಕ ನಿಗದಿಪಡಿಸಲಾಗಿದ್ದು, ಅದು ಪ್ರಗತಿಯಲ್ಲಿದೆ. ಜುಲೈ ಅಂತ್ಯಕ್ಕೆ ವರದಿ ಪಡೆಯಲಾಗುವುದು.

ಸರ್ಕಾರದ ಆದೇಶದಂತೆ ಯೋಜನೆಯ ಮೊದಲನೇ ಹಂತದ ಹರವನಹಳ್ಳಿ ವಿತರಣಾ ಕೇಂದ್ರದವರೆಗಿನ ಏತ ಕಾಮಗಾರಿಗಳನ್ನು ಟರ್ನ್‌ಕೀ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಪ್ಯಾಕೇಜ್‌ವಾರು ವಿಂಗಡಿಸಿ, ಟೆಂಡರ್ ಆಹ್ವಾನಿಸಲು ತಾಂತ್ರಿಕ ಉಪಸಮಿತಿ ಹಾಗೂ ನಿಗಮದ ನಿರ್ದೇಶಕರ ಮಂಡಳಿಯಿಂದ ಅನುಮೋದನೆ ಪಡೆದು, ಹರವನಹಳ್ಳಿ ವಿತರಣಾ ತೊಟ್ಟಿಯವರೆಗಿನ ರೂ.2669.83 ಕೋಟಿ ಮೊತ್ತದ ಲಿಫ್ಟ್ ಕಾಮಗಾರಿಗಳನ್ನು 5 ಪ್ಯಾಕೇಜ್‌ಗಳಲ್ಲಿ ವಿಂಗಡಿಸಿ, ದಿನಾಂಕ 2/11/2012ರಂದು ಟೆಂಡರ್ ಆಹ್ವಾನಿಸಿ, ಸ್ವೀಕರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

2. ಪರಮಶಿವಯ್ಯ ವರದಿ ಆಧಾರಿತ ಯೋಜನೆ:

ರಾಜ್ಯದ ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಪರಮಶಿವಯ್ಯ ವರದಿ ಆಧಾರಿತ ದೂರಗಾಮಿ ಯೋಜನೆಯನ್ನು ಸರ್ಕಾರವು ಕೈಗೆತ್ತಿಕೊಂಡಿದ್ದು, ಈ ನಿಟ್ಟಿನಲ್ಲಿ 2003ರಲ್ಲಿ ಎ.ಎಲ್.ಟಿ.ಎಂ. (Air Borne Laser Terrain Mapping) ಸರ್ವೆ ಕೆಲಸವನ್ನು ಮೆ॥ ಎನ್.ಆರ್.ಎಸ್.ಎ

(National Remote Sensing Agency), ಕೇಂದ್ರ ಸರ್ಕಾರದ ಸಂಸ್ಥೆಗೆ ವಹಿಸಿತ್ತು. ಸದರಿ ಸಂಸ್ಥೆಯು, ಥೀಮ್ಯಾಟಿಕ್ ಮ್ಯಾಪಿಂಗ್, ನೀರಿನ ಲಭ್ಯತೆ ಅಧ್ಯಯನಗಳು ಜಿಯೋಮ್ಯಾಟಿಕ್ ಕೇಂದ್ರಕ್ಕೆ ಹಾರ್ಡ್‌ವೆರ್ ಮತ್ತು ಸಾಫ್ಟ್‌ವೇರ್ ಪೂರೈಕೆ, ಮಾಲಾ ಕಾಲುವೆಯ ಎ.ಎಲ್.ಟಿ.ಎಂ. ಸರ್ವೆ ಪೂರ್ಣ-ಗೊಳಿಸಿರುತ್ತಾರೆ.

ಪ್ರಸ್ತಾಪಿತ ಕಾಮಗಾರಿಯ ಬಾಕಿ ಉಳಿದ ಅಂಶಗಳನ್ನು ಕೈಗೊಳ್ಳಲು ರೂ.23.50 ಕೋಟಿ ಮಾರ್ಪಡಿತ ಅಂದಾಜಿಗೆ ಸರ್ಕಾರದಿಂದ ದಿ: 20-07-2011ರಂದು ಆಡಳಿತಾತ್ಮಕ ಅನುಮೋದನೆ ಪಡೆದು, ಟೆಂಡರ್ ಮೂಲಕ ಈಗಾಗಲೇ ಸಲಹಾ ಸೇವಾ ಸಂಸ್ಥೆಗೆ ದಿನಾಂಕ 24/8/2012ರಂದು ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸಂಸ್ಥೆಯು ಮಳೆ ಪ್ರಮಾಣದ ದಾಖಲೆಗಳು ಸೇವಾ ಕಾಲುವೆ ಪ್ರದೇಶದ ಸಣ್ಣ ನೀರಾವರಿ ಕೆರೆಗಳ ಮಾಹಿತಿ, ಎನ್.ಆರ್.ಎಸ್.ಎ. ನೀಡಿರುವ ALTM ಸರ್ವೆ ಮಾಹಿತಿ, ಜಲವಿಜ್ಞಾನ ಅಧ್ಯಯನಗಳು ಆಧಾರದ ಮೇಲೆ ಮಾಲಾ ಕಾಲುವೆಯ ಪಂಕ್ತೀಕರಣ ಒಳಗೊಂಡಂತೆ ಪ್ರಾರಂಭಿಕ ಅಧ್ಯಯನದ ವರದಿಯನ್ನು ಸಲ್ಲಿಸಿರುತ್ತದೆ.

ಈ ನಡುವೆ ಪರಮಶಿವಯ್ಯ ವರದಿ ಆಧಾರಿತ ಯೋಜನೆ, ಎತ್ತಿನಹೊಳೆ ಯೋಜನೆ ಮತ್ತು ಹೇಮಾವತಿ ಪ್ರವಾಹ ಹರಿವು ಕಾಲುವೆ ಯೋಜನೆಗಳಿಂದ ಲಭ್ಯವಾಗುವ ಒಟ್ಟಾರೆ ನೀರನ್ನು ಕೊಂಡ್ಯೊಯಲು 'ಕರ್ನಾಟಕ ವಾಟರ್ ಗ್ರಿಡ್' ಸಂಯುಕ್ತ ಕಾಲುವೆಯೊಂದನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಪರಶೀಲನೆಯಲ್ಲಿ ಇರುತ್ತದೆ.

ಸರ್ಕಾರದ ಆದೇಶ ಸಂ:ಜಸಂಇ:54:ವಿಬ್ಯಾಇ:2010 (ಭಾಗ-4) ಬೆಂಗಳೂರು ದಿ:23.11.2011ರಲ್ಲಿ ಪರಮಶಿವಯ್ಯ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಪಶ್ಚಿಮಕ್ಕೆ ಹರಿಯುವ ನೀರನ್ನು ತಿರುವುಗೊಳಿಸುವ ಯೋಜನೆಯ ಅನುಷ್ಠಾನಕ್ಕೆ ತಾಂತ್ರಿಕ ಸಲಹೆ ಹಾಗೂ ಮಾರ್ಗದರ್ಶನ ನೀಡಲು ಕಾರ್ಯ ಪ್ರವೃತ್ತವಾಗಿದೆ. ಸಲಹಾ ಸಂಸ್ಥೆಯು ಯೋಜನೆಯ ಬಗ್ಗೆ ಸಲ್ಲಿಸಿದ್ದ ಪ್ರಾರಂಭಿಕ ಅಧ್ಯಯನದ ವರದಿಯು ಸದರಿ ಸಮಿತಿಯ ಪರಶೀಲನೆಯಲ್ಲಿದೆ. ಪ್ರಸ್ತಾವನೆಯಲ್ಲಿ ಅಡಕಗೊಂಡಿರುವ ತಾಂತ್ರಿಕ ಅಂಶಗಳು ಹಾಗೂ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಈಗಾಗಲೇ ಅಧ್ಯಯನ ಕೈಗೊಂಡಿರುವ ಸಮಿತಿಯ ಪೂರ್ಣ ವರದಿ ಪಡೆದು, ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ,

ಹಿರಿಯ ಅಧಿಕಾರಿಗಳು, ತಾಂತ್ರಿಕ ಪರಿಣಿತರು ಹಾಗೂ ಜನಪ್ರತಿನಿಧಿಗಳ ಸಭೆ ಕೈಗೊಂಡು, ಪ್ರಸ್ತಾವನೆಯ ಬಗ್ಗೆ ಸರ್ಕಾರವು ಮುಂದಿನ ಅಗತ್ಯ ಕ್ರಮ ಕೈಗೊಳ್ಳುವುದು.

ಮಾನ್ಯ ಅಧ್ಯಕ್ಷರೆ, ಮುಂದೆ ಹೋಗಿ ಹೇಳಬೇಕೆಂದರೆ, ಪ್ರಸ್ತುತ ಸರ್ಕಾರದಿಂದ ಅನುಮೋದಿತಗೊಂಡು ಅನುಷ್ಠಾನಗೊಳ್ಳುತ್ತಿರುವ ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗಿರುವ 24.01, TMC ನೀರನ್ನು ಕೃಷ್ಣಾ ಮತ್ತು ಕಾವೇರಿ ಕಣಿವೆಗಳ ಬೇರ್ಪಡಿಸುವ ಎತ್ತರ ಪ್ರದೇಶ ridge line R.L.965 ಮೀಟರ್‌ಗೆ ಹರಣಿನಹಳ್ಳಿ ವಿತರಣಾ ತೊಟ್ಟಿ ಕೊಂಡೋಯ್ಯಲು ಯೋಚಿಸಲಾಗಿದೆ. ಇದರಿಂದ ಎಡಭಾಗದ ಕೃಷ್ಣಾ ಕಣಿವೆಯ ಬರ ಪೀಡಿತ ಜಿಲ್ಲೆಗಳ ಕುಡಿಯುವ ನೀರಿನ ಅವಶ್ಯಕತೆಗಳು ಇರುವ ಪ್ರದೇಶಗಳಿಗೆ ನೀರು ಪೂರೈಸಲು ಸಾಧ್ಯವಾಗುವುದು. ಇಲ್ಲಿಂದ ನೀರು ಸುಮಾರು 80 ಕಿ.ಮೀ. ಗುರುತ್ವ ಕಾಲುವೆ, gravity canal ಮುಖಾಂತರ ಕ್ರಮಿಸಿದ ನಂತರ ಉದ್ದೇಶಿತ ಕರ್ನಾಟಕ ವಾಟರ್ ಗ್ರಿಡ್ ಕಾಲುವೆಗೆ ನೀರನ್ನು ಪೂರೈಸಬಹುದಾಗಿದೆ. ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗಿರುವ ನೀರನ್ನು R.L.965 ಬದಲಾಗಿ R.L.909 ಮೀಟರ್‌ಗೆ ಆರಂಭಗೊಳ್ಳುವ ಉದ್ದೇಶಿತ ಕರ್ನಾಟಕ ವಾಟರ್ ಗ್ರಿಡ್ ಕಾಲುವೆಗೆ ಸೇರಿಸಿದರೆ ಕುಡಿಯುವ ನೀರಿನ ಅಗತ್ಯತೆ ಇರುವ ಕೃಷ್ಣಾ ಕಣಿವೆಯ ಪ್ರದೇಶಗಳು ನೀರಿನ ಸೌಲಭ್ಯದಿಂದ ವಂಚಿತಗೊಳ್ಳುವವು. ಈ ಹಿನ್ನೆಲೆಯಲ್ಲಿ ಸದ್ಯ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಅನುಷ್ಠಾನಗೊಳ್ಳುತ್ತಿರುವ ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗುವ ನೀರನ್ನು ಯೋಜಿತ R.L.965 ಮೀಟರ್‌ಗೆ ಕೊಂಡೊಯ್ಯುವುದು, ನಂತರ ಕರ್ನಾಟಕ ವಾಟರ್ ಗ್ರಿಡ್ ಕಾಲುವೆಯ ಸುಮಾರು 80ನೇ ಕಿ.ಮೀ.ದಲ್ಲಿ ಸೇರಿಸಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರನ್ನು ಪೂರೈಸಬಹುದಾಗಿದೆ. ಪರಮಶಿವಯ್ಯನವರ ವರದಿ ಆದಾರಿತ ವಿಸ್ತೃತ ಯೋಜನೆಯ ವರದಿ ತಯಾರಿಕೆಯ ಪ್ರಗತಿಯಲ್ಲಿದ್ದು ಸದರಿ ಯೋಜನೆಯಿಂದ ಲಭ್ಯವಾಗುವ ನೀರನ ಪ್ರಮಾಣವು ಕೋಲಾರ, ಚಿಕ್ಕಬಳ್ಳಾಪುರ ಮತ್ತಿತರ ಜಿಲ್ಲೆಗಳ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾದರೆ ಎತ್ತಿನಹೊಳೆಯ ಯೋಜನೆಯ gravity canal ನ್ನು 80 ಕಿ.ಮೀ.ಗೆ ಮೊಟಕುಗೊಳಿಸಿ ಇದರ ವ್ಯಾಪ್ತಿ ಅಡಿಯಲ್ಲಿ ಬರುವ ಬೇಲೂರು, ಕಡೂರು, ಅರಸೀಕೆರೆ, ಚಿತ್ರದುರ್ಗ

ಜಿಲ್ಲೆಯ ಅಗತ್ಯತೆಯನ್ನು ಪೂರೈಸುವ ವಾಣಿವಿಲಾಸ್ ಸಾಗರ ಮತ್ತಿತರ ಅಗತ್ಯ ಪ್ರದೇಶಗಳಿಗೆ ನೀರನ್ನು ಒದಗಿಸಬಹುದಾಗಿದೆ. ಇದರ ಬಗ್ಗೆ ಸರ್ಕಾರ ಎಲ್ಲರ ಜೊತೆ ಚರ್ಚೆ ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಎರಡನ್ನೂ ಕೂಡ ನಾವು ಅತ್ಯಂತ ಗಂಭೀರವಾಗಿ ಮತ್ತು ಬಹಳಷ್ಟು ಜ್ವಲಂತ ಸಮಸ್ಯೆ ಇರುವಂಥ ಕೋಲಾರ, ಚಿಕ್ಕಬಳ್ಳಾಪುರ ಇನ್ನಿತರ ಜಿಲ್ಲೆಗಳಿಗೆ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಬಹಳ ಪ್ರಾಮಾಣಿಕವಾಗಿ ಮಾಡುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : 80 ಕಿ.ಮೀ.canal ಬೇಲೂರು, ಹಳೇಬೀಡು ಅಲ್ಲಿಗೆ ಹೋಗುತ್ತದೆಯಾ?

ಶ್ರೀ ಎಂ.ಬಿ. ಪಾಟೀಲ್ : ಅದು ಎಲ್ಲಾ ಸೇರಿಯೇ ಈ ಎತ್ತಿನಹೊಳೆ ಎರಡು ಯೋಜನೆ. ಒಂದನೆಯದು 80 ಕಿ.ಮೀ. canal ಬರುತ್ತದೆ. ಅದು R.L.965 ದಲ್ಲಿ ಬರುತ್ತದೆ. ಇನ್ನೊಂದು ಪರಮಶಿವಯ್ಯನವರ ವರದಿಯಲ್ಲಿ grand canal ಎಂದು 900RLರಲ್ಲಿ ಏನು ಮಾಡಿದ್ದಾರೆ, ಅದರಲ್ಲಿ ಬರುತ್ತದೆ. ನಮ್ಮ DPR ಮತ್ತು technical sanction ಆದ ಮೇಲೆ grand canal ನಿಂದ gravity ಮುಖಾಂತರ ಇದನ್ನು RL909 ಗೆ ತಿರುವು ಒಯ್ದಮೇಲೆ ಆ ಒಂದು canal ದಿಂದ ಆ 80 ಕಿ.ಮೀ. canal ಗೆ ಪೂರೈಸಬಹುದಾಗಿದೆ, ಧನ್ಯವಾದಗಳು.

ಶ್ರೀ ಶಿವಶಂಕರರೆಡ್ಡಿ : ಸಭೆಯನ್ನು ಬೇಗ ಮಾಡಬೇಕು.

ಅಧ್ಯಕ್ಷರು : No discussion.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಬೋರ್‌ವೆಲ್ ಕೊರೆಯಬೇಕಾದರೆ 1200 ಮತ್ತು 1800 ಅಡಿಯವರೆಗೆ ಹೋಗುತ್ತಿದೆ. ದಯವಿಟ್ಟು ಕಾಲ ಮಿತಿಯೊಳಗೆ ಮಾಡುವುದಕ್ಕೆ ಹೇಳಬೇಕು.

ಅಧ್ಯಕ್ಷರು : ಆಯಿತು. ಚರ್ಚೆ ಮುಕ್ತಾಯವಾಯಿತು.

2. ವಿಷಯ : ರಾಜ್ಯದಲ್ಲಿರುವ ಕಂದಾಯರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದು ಹಾಗೂ ಯೋಜನಾ ಆಯೋಗದಿಂದ ನೇರವಾಗಿ ಹಣ ತೊಡಗಿಸುವ ಕಂದಾಯರಹಿತ ಗ್ರಾಮಗಳಿಗೆ ಗ್ರಾಮಸಭೆ ನಡೆಸಲು ಮೂಲಭೂತ ಸೌಲಭ್ಯ ದೊರಕಿಸುವ ಬಗ್ಗೆ.